ಸೆಲೆಬ್ರಿಟಿ

■ ಹನಿ

## ಭಗತ್‌ರ 'ಗರ್ಲ್‌ಫ್ರೆಂಡ್'

ಚೇತನ್ ಭಗತ್‌ರ ಹೊಸ ಇಂಗ್ಲಿಷ್ ಕಾದಂಬರಿ **Half Girl Friend** ಅಕ್ಟೋಬರ್‌ನಲ್ಲಿ ಬಿಡುಗಡೆಯಾಗುತ್ತಿದೆ. ಯುಟ್ಯೂಬ್‌ನಲ್ಲಿ ಹೊಸ ಕಾದಂಬರಿಯ ಟ್ರೇಲರ್ ಕೂಡಾ ಮಿಂಚುತ್ತಿದೆ! 'ನ್ಯೂಯಾರ್ಕ್ ಟೈಮ್ಸ್' ಪ್ರಕಾರ 'ಭಾರತದ ಇತಿಹಾಸದಲ್ಲೇ ಅತ್ಯಂತ ಹೆಚ್ಚು ಪ್ರತಿಗಳನ್ನು ಮಾರುತ್ತಿರುವ ಇಂಗ್ಲಿಷ್ ಕಾದಂಬರಿಕಾರ' ಈ ಭಗತ್. **Half Girl Friend** ಅವರ ಆರನೇ ಕಾದಂಬರಿ. ಈ ಹಿಂದೆ ಬರೆದಿರುವ ನಾಲ್ಕು ಕಾದಂಬರಿಗಳೂ ಸಿನಿಮಾ ಆಗಿ ಹಿಟ್ ಆಗಿರುವುದರಿಂದ, ಸಿನಿಮಾದಂತೆ ಕಾದಂಬರಿಗೂ ಒಂದು ಟ್ರೇಲರ್ ಬಿಡುಗಡೆ ಸಹಜವೇ ಅನ್ನಬಹುದು. ಕಾದಂಬರಿಯ ಪ್ರಚಾರಕ್ಕೆ ಟ್ರೇಲರ್ ನಿರ್ಮಿಸಿರುವ ಬಗ್ಗೆ ಟ್ವಿಟರ್‌ನಲ್ಲಿ ಈಗಾಗಲೆ ಕೊಂಕುಮಾತುಗಳೂ ಕೇಳಿಬಂದಿವೆ. ಅದೂ ಒಂದು ರೀತಿಯ ಪ್ರಚಾರವೇ. ಫ್ಲಿಪ್‌ಕಾರ್ಟ್ ನಲ್ಲಿ ಈಗಾಗಲೆ ಪುಸ್ತಕದ ಪ್ರತಿಗಳ ಖರೀದಿಗೆ ಬುಕಿಂಗ್ ಕೂಡಾ ಶುರುವಾಗಿದೆ!

ಕಾದಂಬರಿಯ ವಸ್ತು ಸಿನಿಮೀಯವಾಗಿಯೇ ಇದೆ. ಬಿಹಾರದ ಇಂಗ್ಲಿಷ್ ಬಾರದ ಹಳ್ಳಿ ಹುಡುಗನೊಬ್ಬ ಇಂಗ್ಲಿಷ್ ಬಲ್ಲ ಸಿಟಿ ಹುಡುಗಿಯೊಬ್ಬಳನ್ನು ಪ್ರೀತಿಸುವುದು. ಆಕೆಗೆ ಆತನ ಗೆಳೆತನವಷ್ಟೇ ಇಷ್ಟ; ಅವನಿಗೆ ಆಕೆಯ ಪ್ರೀತಿ ಬೇಕು. ಕೊನೆಗೆ ಆತನ ಒತ್ತಾಯಕ್ಕೆ ಮಣಿದು ಅರ್ಧ ಗರ್ಲ್ ಫ್ರೆಂಡ್ ಆಗಲು ಆಕೆ ಒಪ್ಪುತ್ತಾಳಂತೆ. ಕುತೂಹಲ ಕೆರಳುವಂತೆ ಬರೆಯುವಲ್ಲಿ ಭಗತ್ ನಿಸ್ಸೀಮರು. ಕಥೆಯ ಎಳೆ ನೋಡಿದರೆ ಇದೂ ಸಿನಿಮಾ ಆಗಬಹುದು.

ಭಗತ್ ಬರೆದ **Five point someone** ಕಾದಂಬರಿ ಅಮೀರ್‌ಖಾನ್ ಅಭಿನಯದ 'ಥ್ರೀ ಈಡಿಯಟ್ಸ್' ಹಿಂದಿ ಸಿನಿಮಾ ಆಯಿತು. **Three mistakes of my life** 'ಕಾಯ್ ಪೋ ಚೆ' ಸಿನಿಮಾ ಆಗಿ ಹಿಟ್ ಆಯಿತು. **Two States** ಸಿನಿಮಾ ಕೂಡಾ ಗೆದ್ದಿತು. ಇದೀಗ ಬಿಡುಗಡೆಯಾಗಿರುವ ಸಲ್ಮಾನ್ ಖಾನ್‌ನ 'ಕಿಕ್' ಚಿತ್ರಕ್ಕೆ ಭಗತ್ ಚಿತ್ರಕಥೆಯಿದೆ. ಒಟ್ಟಾರೆ ಭಗತ್ ಈಗ ಓಡುವ ಕುದುರೆ. ದೆಹಲಿಯ ಮಧ್ಯಮ ವರ್ಗದ ಪಂಜಾಬಿ ಕುಟುಂಬದಲ್ಲಿ ಜನಿಸಿದ (ಬರ್ತ್‌ಡೇ 22/4/1974) ಭಗತ್, ದೆಹಲಿ ಐಐಎಂ ನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಮುಗಿಸಿ, ಅಹ್ಮದಾಬಾದ್ ಐಐಎಂ ನಲ್ಲಿ ಎಂಬಿಎ ಮುಗಿಸಿ ಡಾಯಿಚ್ ಬ್ಯಾಂಕಿನಲ್ಲಿ ಕೆಲಸದಲ್ಲಿದ್ದರು. 2009ರಲ್ಲಿ ಕೆಲಸ ಬಿಟ್ಟು ಕಥೆ ಬರೆಯಲೆಂದೇ ಮುಂಬೈಗೆ ವಲಸೆ ಬಂದವರು. ಈಗ ಬರೆಯುವುದೇ ಬಿಡುವಿಲ್ಲದ ಉದ್ಯೋಗ. ಹೊಸ ಕಾದಂಬರಿ ಹೊಸ ಮಾರಾಟ ದಾಖಲೆ ಬರೆಯುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ.




## ಮರಳುವರೆ ನದೀಂ?

ಬಾಲಿವುಡ್‌ನಲ್ಲಿ ಕ್ಯಾಸೆಟ್ ಉದ್ಯಮಕ್ಕೆ ದೊರೆಯ ಸ್ಥಾನಮಾನ ದೊರಕಿಸಿಕೊಟ್ಟ ಟಿ ಸೀರೀಸ್‌ನ ಮಾಲೀಕ ಗುಲ್ಶನ್ ಕುಮಾರ್ ಕೊಲೆಯ ಬಳಿಕ, ದೂರದ ದುಬೈನಲ್ಲಿ ನೆಲೆಸಿರುವ ನದೀಮ್, ಶೀಘ್ರವೇ ಹೊಸ ಹಿಂದಿ ಸಿನಿಮಾಕ್ಕೆ ಏಕಾಂಗಿಯಾಗಿ ಸಂಗೀತ ನೀಡುವ ಸುದ್ದಿ ಬಂದಿದೆ. 'ಇಶ್ಕ್ ಫಾರೆವರ್' ಎನ್ನುವುದು ಚಿತ್ರದ ಹೆಸರು. 2005ರವರೆಗೆ ನದೀಂ– ಶ್ರವಣ್ ಸಂಗೀತ ನಿರ್ದೇಶಕ ಜೋಡಿ ಬಾಲಿವುಡ್ ಸಿನಿಮಾ ಲೋಕವನ್ನು ಅಕ್ಷರಶಃ ಆಳಿತೆಂದೇ ಹೇಳಬೇಕು. ಆದರೆ ಗುಲ್ಶನ್ ಕೊಲೆಯ ಬಳಿಕ ಜೋಡಿ ದೂರವಾಯಿತು. ಗುಲ್ಶನ್ ಕೊಲೆಗೆ ಸಂಚು ಹೂಡಿದ ಆರೋಪದಡಿ ನದೀಮ್‌ನನ್ನು ಪೊಲೀಸರು ಬಂಧಿಸಿದರೂ, ಕೋರ್ಟಿನಲ್ಲಿ ಕೇಸು ನಿಲ್ಲಲಿಲ್ಲ. ಈ ಪ್ರಕರಣದಲ್ಲಿ ಬಂಧನಕ್ಕೆ ಒಳಗಾದ ಭೂಗತ ಪಾತಕಿ ಅಬೂ ಸಲೇಂ ಕೂಡಾ ಮಂಪರು ಪರೀಕ್ಷೆಯಲ್ಲಿ 'ಕೊಲೆಯಲ್ಲಿ ನದೀಮ್ ಪಾತ್ರವಿಲ್ಲ' ಎಂದೇ ಹೇಳಿದ.



ಹಾಗಿದ್ದೂ ನದೀಮ್ ದುಬೈಯಿಂದ ಮುಂಬೈಗೆ ಮರಳಲು ಆಗುತ್ತಿಲ್ಲ. ಏಕೆಂದರೆ ಮುಂಬೈ ಪೊಲೀಸರು ಈತನ ವಿರುದ್ಧ ಹೊರಡಿಸಿದ ವಾರಂಟ್‌ಅನ್ನು ಇನ್ನೂ ಹಿಂದಕ್ಕೆ ಪಡೆದಿಲ್ಲ. 'ಐವರು ಪೊಲೀಸ್ ಅಧಿಕಾರಿಗಳು ಮತ್ತು ಒಬ್ಬ ಮಾಜಿ ಗೃಹ ಸಚಿವರು ಸೇರಿ ನನ್ನ ವಿರುದ್ಧ ಸಂಚು ರೂಪಿಸಿದರು. ವಿನಾಕಾರಣ ಬಂಧನ ನಡೆಸಿದರು' ಎನ್ನುವುದು ನದೀಂ ಅಳಲು. 'ಆಶಿಕಿ' ಚಿತ್ರದ ಮೂಲಕ ಬಾಲಿವುಡ್‌ನಲ್ಲಿ ಹೊಸ ದಾಖಲೆ ನಿರ್ಮಿಸಿದ ನದೀಂ–ಶ್ರವಣ್ ಜೋಡಿ, ಬಳಿಕ ದಿಲ್ ಹೈ ಕಿ ಮಾನ್‌ತಾ ನಹೀ, ಸಾಜನ್, ಸಡಕ್, ದೀವಾನಾ, ಪರ್‌ದೇಸ್ ಚಿತ್ರಗಳ ಮೂಲಕ ಸೂಪರ್‌ಹಿಟ್ ಆಯಿತು. 7 ವರ್ಷಗಳಲ್ಲಿ 4 ಫಿಲಂಫೇರ್ ಸಹಿತ 113 ಪ್ರಶಸ್ತಿಗಳನ್ನು ಗೆದ್ದುಕೊಂಡಿತು. ಈಗ ನದೀಂ ಒಬ್ಬಂಟಿಯಾಗಿ ನೀಡುವ ಸಂಗೀತ ನಿರ್ದೇಶನ ಹಿಟ್ ಆಗಬಹುದೆ ಎಂಬ ಕುತೂಹಲ ಎಲ್ಲರಲ್ಲಿದೆ. ಸದ್ಯ ದುಬೈಯಲ್ಲಿ 'ಅರೇಬಿಯನ್ ಅತ್ತರ್ಸ್' ಎಂಬ ಉದ್ಯಮ ಸ್ಥಾಪಿಸಿ ಸೆಟ್ಲ್ ಆಗಿರುವ ನದೀಮ್ ಸಂಗೀತ ಮತ್ತೆ ಹಳೆಯ ಜಾದೂವನ್ನು ಮರುಕಳಿಸಬಹುದೆ?


Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008,


©All rights reserved. Reproduction in whole or in part without permission is prohibited.


RNI No 7891/65